ಕರ್ನಾಟಕ ಸರಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಜಿಲ್ಲಾ ಪಂಚಾಯತ ಧಾರವಾಡ

# ಮಾತು ಕತೆ

ನಮ್ಮ ನಡೆ ಗ್ರಾಮದ ಕಡೆ...






ಸಂಪುಟ : 01 ಸಂಚಿಕೆ 05 : ಮೇ 2023

## ನಲವಡಿ ಗ್ರಾಮ ಪಂಚಾಯತಿ

ಜಿಲ್ಲೆ : ಧಾರವಾಡ

### ನಲವಡಿ ಮಾತುಕತೆ...



◆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬೇರು ಮಟ್ಟದ ಸ್ಥಳೀಯ ಸರಕಾರಗಳಾಗಿರುವ ಗ್ರಾಮ ಪಂಚಾಯತಿಗಳು, ಪ್ರಜಾಪಭುತ್ವದ ತತ್ವಗಳ ಆಧಾರದ ಮೇಲೆ ರಚನೆಗೊಂಡಿದ್ದು, ಗ್ರಾಮಸ್ಥರ ಬೇಕು ಬೇಡಗಳಿಗೆ ತ್ವರಿತವಾಗಿ ಸ್ಪಂದಿಸಿ, ಅವರ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ ಹಳ್ಳಿಯ ವಿಧಾನಸೌಧಗಳಾಗಿವೆ. ಈ ಸ್ಥಳೀಯ ಸರಕಾರಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳ ಅನೇಕ ಮಹತ್ವಾಕಾಂಕ್ಷಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡುತ್ತಿವೆ. ತಮ್ಮ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನ ಮಾಡಿದ ರಚನಾತ್ಮಕ ಮತ್ತು ಅಭಿವೃದ್ಧಿ ಕೆಲಸಗಳನ್ನು ಸಾರ್ವಜನಿಕರ ಸಂಗಡ "ಮಾತುಕತೆ" ಮಾಸಿಕದ ಮೂಲಕ ಹಂಚಿಕೊಳ್ಳಬೇಕು ಆ ಮೂಲಕ ಮಾತುಕತೆಯು ಗ್ರಾಮ ಪಂಚಾಯತಿಯ ಸಂವಹನದ ಮಾಧ್ಯಮವಾಗಬೇಕೆಂಬುದು ಜಿಲ್ಲಾ ಪಂಚಾಯತಿಯ ಆಶಯವಾಗಿದೆ.

◆ ಅಣ್ಣಿಗೇರಿ ತಾಲೂಕಿನ ನಲವಡಿ ಗ್ರಾಮ ಪಂಚಾಯತಿಯಲ್ಲಿ ಜನಪ್ರತಿನಿಧಿಗಳು ಮತ್ತು ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗದವರು ಸಮನ್ವಯದಿಂದ ಮತ್ತು ತನ್ನ ವ್ಯಾಪ್ತಿಯ ಪ್ರಜೆಗಳ ಸಹಭಾಗಿತ್ವದಿಂದ ಅನೇಕ ಜನಹಿತದ ಕಾರ್ಯಗಳನ್ನು ಮಾಡುತ್ತಿರುವದು ಗಮನಾರ್ಹವಾಗಿದೆ. ಇದು ಇತರ ಗ್ರಾಮ ಪಂಚಾಯತಿಗಳಿಗೆ ಪ್ರೇರಣೆಯಾಗಲಿ ಮತ್ತು ಗ್ರಾಮೀಣ ಪ್ರದೇಶದ ಜನರ ಜೀವನವನ್ನು ಹಸನುಗೊಳಿಸುವಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಲಿ ಎಂದು ಆಶಿಸುತ್ತೇನೆ.

◆ ಕರ್ನಾಟಕ ವಿಧಾನಸಭಾ ಚುನಾವಣೆಯ ಮತದಾನವು ಮೇ 10 ರಂದು ಇದ್ದು, ಎಲ್ಲಾ ಮತದಾರರು ತಪ್ಪದೇ ಮತದಾನ ಮಾಡಲು, ಗ್ರಾಮ ಪಂಚಾಯತಿಗಳು ಕ್ರಮ ಕೈಕೊಳ್ಳಬೇಕು, ಆ ಮೂಲಕ ಮತದಾನದ ಪ್ರಮಾಣವನ್ನು ಹೆಚ್ಚಿಸಿಬೇಕು.

◆ ನಲವಡಿ ಗ್ರಾಮ ಪಂಚಾಯತಿಯ ಮೂಲಕ ಪ್ರಕಟಗೊಳ್ಳುತ್ತಿರುವ ಮಾತುಕತೆ ಮಾಸ ಪತ್ರಿಕೆಯ ಈ ಸಂಚಿಕೆಗೆ ಶುಭ ಹಾರೈಸುತ್ತೇನೆ.

**ಶ್ರೀಮತಿ ಸ್ವರೂಪ ಟಿ ಕೆ** ಐಎಎಸ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಧಾರವಾಡ



### ಘನ ತ್ಯಾಜ್ಯ ನಿರ್ವಹಣೆ ...




◆ ಸ್ವಚ್ಛ ಭಾರತ ಮಿಶನ್ ಮತ್ತು 15 ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನುದಾನದಲ್ಲಿಒಟ್ಟು ರೂ. 12 ಲಕ್ಷಗಳಲ್ಲಿ ನಲವಡಿ ಗ್ರಾಮದಲ್ಲಿ ಸ್ವಚ್ಛ ಸಂಕೀರ್ಣ ಕಟ್ಟಡವನ್ನು ನಿರ್ಮಿಸಲಾಗಿದೆ. 2 ಗ್ರಾಮಗಳ 1,322 ಕುಟುಂಬಗಳಿಗೆ ಹಸಿ ಮತ್ತು ಒಣ ಕಸ ಸಂಗ್ರಹಣೆಗಾಗಿ ಕಸದ ಬುಟ್ಟಿಗಳನ್ನು ಗ್ರಾಮ ಪಂಚಾಯತಿಯಿಂದ ವಿತರಿಸಲಾಗಿದೆ. ಟಾಟಾ ಏಸ್ ಗೋಲ್ಡ ವಾಹನವು ನಲವಡಿ ಗ್ರಾಮದಲ್ಲಿ 3 ದಿವಸ ಮತ್ತು ಮಣಕವಾಡ ಗ್ರಾಮದಲ್ಲಿ 3 ದಿನ ಸಂಚರಿಸಿ ಕಸವನ್ನು ಸಂಗ್ರಹಿಸುತ್ತಿದೆ.

◆ ಗ್ರಾಮ ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ನಡುವೆ ಘನ ತ್ಯಾಜ್ಯ ನಿರ್ವಹಣೆಗಾಗಿ ಒಪ್ಪಂದವಾಗಿದ್ದು, ಸ್ವ ಸಹಾಯ ಸಂಘದ ಮಹಿಳೆಯರಾದ ಶ್ರೀಮತಿ ರೇಣವ್ವ ಮರಿಯಪ್ಪ ಮಾದರ ಮತ್ತು ಶ್ರೀಮತಿ ನೀಲವ್ವ ಲಕ್ಷ್ಮಣ ಮಾದರರವರು ಶ್ರದ್ಧೆಯಿಂದ ಕಾರ್ಯನಿರ್ವಹಿಸುತ್ತಿರುವದು ಶ್ಲಾಘನೆಗೆ ಯೋಗ್ಯವಾಗದೆ.

◆ ನಲವಡಿ ಗ್ರಾಮವು ಹೆದ್ದಾರಿ ಮೇಲಿರುವ ಗ್ರಾಮವಾಗಿದ್ದು, ಮಣಕವಾಡ ಗ್ರಾಮವು ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದ್ದು, ಕಸದ ಉತ್ಪಾದನೆ ಹೆಚ್ಚಿದ್ದರೂ, ನಮ್ಮ ಗ್ರಾಮಗಳನ್ನು ಸ್ವಚ್ಛವಾಗಿ ಇಡುವದೇ ನಮ್ಮ ಪರಮ ಕರ್ತವ್ಯವಾಗಿದೆ.

◆ ನಲವಡಿ ಗ್ರಾಮ ಪಂಚಾಯತಿಯ ಮೂಲಕ ಪ್ರಕಟಗೊಳ್ಳುತ್ತಿರುವ ಮಾತುಕತೆ ಮಾಸ ಪತ್ರಿಕೆಯ ಈ ಸಂಚಿಕೆಗೆ ಶುಭ ಹಾರೈಸುತ್ತೇನೆ.

**ಶ್ರೀಮತಿ ಅನಿತಾ ಚ. ಗರಗದ**
ಉಪಾಧ್ಯಕ್ಷರು, ಗ್ರಾಮ ಪಂಚಾಯತ್ ನಲವಡಿ

### ನಮ್ಮ ಗ್ರಾಮಗಳ ಹಿನ್ನೆಲೆ ಮತ್ತು ಮುನ್ನೆಲೆ...



◆ ಕರ್ನಾಟಕದ ಕವಿಚಂದ್ರ ಎಂದು ಬಿರುದಾಂಕಿತಗೊಂಡ ಶ್ರೀಕಂಠಶಾಸ್ತ್ರಿಗಳ ಹುಟ್ಟೂರು ನಮ್ಮ ನಲವಡಿ ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ. ಗ್ರಾಮ ಪಂಚಾಯತಿಯು ನಲವಡಿ ಹಾಗೂ ಮಣಕವಾಡ ಎಂಬ ಎರಡು ಗ್ರಾಮಗಳನ್ನು ಹೊಂದಿದ್ದು, ತಾಲೂಕ ಕೇಂದ್ರ ಅಣ್ಣಿಗೇರಿಯಿಂದ 12 ಕಿ.ಮೀ. ಮತ್ತು ಹುಬ್ಬಳ್ಳಿ ಶಹರದಿಂದ 30 ಕಿ.ಮೀ. ದೂರದಲ್ಲಿರುತ್ತದೆ. ಗ್ರಾಮ ಪಂಚಾಯತಿಯ ವ್ಯಾಪ್ತಿಯ ಮಣಕವಾಡವು ಪಂಚಾಯತಿಯಿಂದ 5 ಕಿಮೀ ದೂರವಿದ್ದು, ಇದೊಂದು ಆದ್ಯಾತ್ಮಿಕ ಕೇಂದ್ರವಾಗಿದ್ದು ಇಲ್ಲಿನ ಅನ್ನದಾನೀಶ್ವರ ಮಹಾಮಠವು ತನ್ನದೆ ಆದ ಖ್ಯಾತಿಯನ್ನು ರಾಜ್ಯಾದ್ಯಂತ ಹೊಂದಿದ್ದು ಅಪಾರ ಭಕ್ತಗಣವನ್ನು ಹೊಂದಿದೆ. ನಮ್ಮ ಗ್ರಾಮ ಪಂಚಾಯತಿಯನ್ನು ಜಿಲ್ಲೆಯಲ್ಲಿಯೇ ಮಾದರಿ ಗ್ರಾಮ ಪಂಚಾಯತಿಯನ್ನಾಗಿ ಮಾಡಿ ನಗರ ಪ್ರದೇಶದ ಎಲ್ಲಾ ಸೌಲಭ್ಯಗಳನ್ನು ನಮ್ಮ ಗ್ರಾಮ ವಾಸಿಗಳಿಗೆ ಲಭ್ಯವಾಗುವಂತೆ ಮಾಡುವುದು ನಮ್ಮ ಗುರಿಯಾಗಿದೆ.

**ಶ್ರೀಮತಿ ಕಸ್ತೂರಿ ತುಳಸಪ್ಪ ಹರ್ತಿ**
ಅಧ್ಯಕ್ಷರು, ಗ್ರಾಮ ಪಂಚಾಯತ ನಲವಡಿ

### ನರೇಗಾ ಕಾಯಕವೇ ಕೈಲಾಸ...

◆ ಗ್ರಾಮೀಣ ಭಾಗದ ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಘನ ಸರಕಾರ 2005 ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದಿದ್ದು ಸದರಿ ಯೋಜನೆಯಡಿ ನಲವಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನರಿಗೆ ಅಕುಶಲ ಕೂಲಿ ಒದಗಿಸುವದರ ಮೂಲಕ ಗ್ರಾಮೀಣ ಭಾಗದ ಜನರು ಗುಳೆ ಹೋಗುವದನ್ನು ತಪ್ಪಿಸಲಾಗುತ್ತಿದೆ. ಸದರಿ ಯೋಜನೆಯಡಿ ಗ್ರಾಮಗಳಲ್ಲಿ ಸ್ಮಶಾನ ಅಭಿವೃದ್ಧಿ, ಶಾಲಾ ಅಭಿವೃದ್ಧಿ, ಕುರಿ /ಮೆಕೆ ಶೆಡ್ಡು ನಿರ್ಮಾಣ, ದನದ ಕೊಟ್ಟಿಗೆ ನಿರ್ಮಾಣ, ಸರ್ವ ಋತು ರಸ್ತೆ ನಿರ್ಮಾಣ, ಕೆರೆ ಅಭಿವೃದ್ಧಿ, ರೈತರ ಹೊಲಗಳಲ್ಲಿ ಕೃಷಿಹೊಂಡ, ಬದು ನಿರ್ಮಾಣ ಹಾಗೂ ಇಂಗು ಗುಂಡಿ ನಿರ್ಮಾಣ ಮಾಡುವದರ ಮೂಲಕ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆಗೆ ಹಾಗೂ ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗೆ ಒತ್ತು ನೀಡಲಾಗಿದೆ.

**ಶ್ರೀಮತಿ ರೇಖಾ ಡೊಳ್ಳಿನವರ**
ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಧಾರವಾಡ





ಶ್ರೀ ಅನ್ನದಾನೀಶ್ವರ ದೇವಮಂದಿರಮಠ, ಮಣಕವಾಡ

### ನಲವಡಿ ಶ್ರೀಕಂಠಶಾಸ್ತ್ರಿಗಳು...




◆ ನಲವಡಿ ಎಂದ ತಕ್ಷಣ ನೆನಪಾಗೋ ಮತ್ತೊಂದು ಹೆಸರು ಶ್ರೀಕಂಠಶಾಸ್ತ್ರಿಗಳದ್ದು. ನಲವಡಿ ಶ್ರೀಕಂಠಶಾಸ್ತ್ರಿಗಳೆಂದೇ ಪ್ರಖ್ಯಾತರಾದ, "ಕರ್ನಾಟಕ ಕವಿಚಂದ್ರ" ಬಿರುದಾಂಕಿತರಾದ ಇವರು ಕರ್ನಾಟಕದ ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ಮರೆಯಲಾಗದ ಹೆಸರು.

◆ ನಲವಡಿಯ ಅಮರಯ್ಯ ಮತ್ತು ಗುರುಲಿಂಗಮ್ಮ ದಂಪತಿಗಳ ಉದರದಲ್ಲಿ 1889 ನವಂಬರ್ 14 ರಂದು ಜನಿಸಿದ ಇವರ ಮೂಲ ಹೆಸರು ರಾಚಯ್ಯ. ನಲವಡಿ ಗ್ರಾಮಸ್ಥರೆಲ್ಲರ ಆರ್ಥಿಕ ನೆರವಿನಿಂದ ಕಾಶಿಯಲ್ಲಿ ಸಂಸ್ಕೃತ ಅಧ್ಯಯನ ಮಾಡಿ ಅಧ್ಯಾಪನ ಮಾಡುತ್ತಾ, ಸಮುದಾಯಕ್ಕೆ ಕೀರ್ತನ ಪುರಾಣಗಳನ್ನು ಹೇಳುತ್ತಾ ಜೀವನ ನಿರ್ವಹಣೆ ಮಾಡಿದ ಶಾಸ್ತ್ರಿಗಳು, ರಂಗಭೂಮಿ ಸೆಳೆತಕ್ಕೆ ಒಳಗಾಗಿ 50 ನಾಟಕಗಳನ್ನು 1916 ರಿಂದ 1967 ರ ಅವಧಿಯಲ್ಲಿ ರಚಿಸಿದರು. ಅದರಲ್ಲಿ 44 ನಾಟಕಗಳು ಪ್ರಕಟವಾಗಿವೆ. ಪೌರಾಣಿಕ ನಾಟಕಗಳಾದ ಲಂಕಾದಹನ, ಹಿರಣ್ಯಕಶ್ಯಪು, ಉದ್ದಾಲಕ ಚರಿತ್ರೆ, ಶೈವಶಾಂತಿ, ಸಂತಸಂಗ, ಶಕಪುರುಷ, ಹರಿದರುಶನ, ಶ್ವೇತರಾಗ, ಭಕ್ತ ಸುಧನ್ವ, ಧರ್ಮದ್ರೋಹ, ಅಚಿತ ಲೀಲಾ, ಗೃಹ ಲಕ್ಷ್ಮೀ ಮುಂತಾದವುಗಳು ಭಕ್ತಿ ಪ್ರಧಾನ ನಾಟಕಗಳಾದ ಪ್ರಭು ವಿಜಯ, ದಾರುಕ ವಿಜಯ, ಶಿರಹಟ್ಟಿ ಫಕ್ಕೀರೇಶ್ವರ, ಮಲುಹಣ ಮಲುಹಣಿಯರ ಪ್ರೇಮ ಪ್ರಸಂಗ, ಬೇಡರ ಕಣ್ಣಪ್ಪ, ಭಕ್ತ ಮಾರ್ಕಾಂಡೇಯ, ರೇಣುಕ ವಿಜಯ, ಸತೀ ಸತ್ವ ಪರೀಕ್ಷೆ, ಶಿವಶರಣೆ ನಂಬಿಯಕ್ಕ, ಜಗಜ್ಯೋತಿ ಬಸವೇಶ್ವರ, ಚಿಜ್ಯೋತಿ ಉಳವಿ ಚನ್ನಬಸವೇಶ್ವರ, ಶಿವಯೋಗಿ ಸಿದ್ಧರಾಮ, ಉಜ್ಜಯನಿ ಸಿದ್ಧಲಿಂಗ ವಿಜಯ, ಮಳಲಿ ಮಹಾತ್ಮೆ, ಲೀಲಾವತಾರ, ಹೇಮರಡ್ಡಿ ಮಲ್ಲಮ್ಮ ಮುಂತಾದವುಗಳು ಮತ್ತು ಸಾಮಾಜಿಕ ನಾಟಕಗಳಾದ ಮಂಗಳ ಸೂತ್ರ, ದೇವರ ದುಡ್ಡು, ನವಯುಗ ಕುಮಾರಿ, ದೈವಚಿತ್ರ ಮುಂತಾದವುಗಳು

◆ ಶ್ರೀಕಂಠಶಾಸ್ತ್ರಿಗಳು ಬರೆದ ಎಲ್ಲಾ ನಾಟಕಗಳು ರಂಗದ ಮೇಲೆ ಪ್ರದರ್ಶನಗೊಂಡವು. ಹೇಮರಡ್ಡಿ ಮಲ್ಲಮ್ಮ ನಾಟಕವು ಪೂರ್ವಾರ್ಧ ಮತ್ತು ಉತ್ತರಾರ್ಧ ಎಂದು 2 ಭಾಗಗಳಲ್ಲಿ ರಚಿಸಲ್ಪಟ್ಟ ಸಂಗೀತ ಪ್ರಧಾನ ನಾಟಕವಾಗಿದ್ದು, 1959 ರಲ್ಲಿ ಒಂದೇ ವರ್ಷದಲ್ಲಿ ಗದುಗಿನ ಗವಾಯಿಗಳ ನಾಟಕ ಕಂಪನಿಯು ಸತತ 375 ಪ್ರಯೋಗಗಳನ್ನು ಪ್ರಯೋಗಿಸಿ, ಬಂದ ಲಾಭದಲ್ಲಿ 33 ಎಕರೆ ಹೊಲ ಖರೀದಿಸಿತು ಮತ್ತು ಆ ಹೊಲಕ್ಕೆ ಮಲ್ಲಮ್ಮನ ಹೊಲ ಎಂದು ಹೆಸರಾಯಿತು. ಮತ್ತು ಈ ನಾಟಕ ಪ್ರದರ್ಶನವಾದ ಥೆಟರ್‌ಗೆ ಮಲ್ಲಮ್ಮನ ಥೇಟರ್ ಎಂದೇ ಹೆಸರಾಯಿತು. ವೃತ್ತಿ ಮತ್ತು ಗ್ರಾಮೀಣ ರಂಗಭೂಮಿಯಲ್ಲಿ 25,000 ಕ್ಕೂ ಹೆಚ್ಚು ಪ್ರಯೋಗ ಕಂಡ ಹೆಗ್ಗಳಿಕೆ ಈ ನಾಟಕದ್ದು.

◆ ಈ ಮಹಾನ್ ನಾಟಕಕಾರ, ಕವಿಯ ನೆನಪಿಗಾಗಿ ನಲವಡಿಯಲ್ಲಿ ಆಕರ್ಷಕ ಸ್ಮಾರಕವೊಂದನ್ನು ನಿರ್ಮಿಸಿದ್ದು ಅದರ ಸುತ್ತಲೂ ವನ ನಿರ್ಮಾಣ ಮಾಡುವ ಅವಶ್ಯಕತೆಯಿದೆ.

**ಬಿ ಎಸ್ ಮೂಗನೂರಮಠ**
ಯೋಜನಾ ನಿರ್ದೇಶಕರು
ಜಿಲ್ಲಾ ಪಂಚಾಯತ್ ಧಾರವಾಡ



### ಚಿಣ್ಣರ ಚಿಲಿಪಿಲಿ ಹಾಗೂ ಡಿಜಿಟಲೀಕರಣದತ್ತ ಗ್ರಾಮೀಣ ಗ್ರಂಥಾಲಯಗಳು...



ಅಣ್ಣಿಗೇರಿ ತಾಲೂಕಿನ ನಲವಡಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸರಕಾರದ ಆಶಯದಂತೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೊಸ ವಿಷಯಗಳ ಕಲಿಕೆಗೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಕ್ಕಳನ್ನು ಅಧ್ಯಯನಶೀಲರನ್ನಾಗಿಸುವ ನಿಟ್ಟಿನಲ್ಲಿ ನಲವಡಿ ಗ್ರಾಮದಲ್ಲಿ " ಗ್ರಾಮ ಪಂಚಾಯತ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ " ಸ್ಥಾಪಿಸಲಾಗಿದೆ. ಸದ್ಯ ಹಿರಿಯರು, ಸಾರ್ವಜನಿಕರು ಮತ್ತು ಮಕ್ಕಳು ಸೇರಿ ಒಟ್ಟು 896 ಜನ ಸದಸ್ಯತ್ವ ಹೊಂದಿದ್ದು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಸದರಿ ಕೇಂದ್ರದಲ್ಲಿ 15ನೇ ಹಣಕಾಸು ಯೋಜನೆಯಡಿಯಲ್ಲಿ 2 ಕಂಪ್ಯೂಟರ ಅಳವಡಿಸಿದ್ದು ಇಂಟರ್‌ನೆಟ್ ಸೌಲಭ್ಯವನ್ನು ಕಲ್ಪಿಸಿ ಮಕ್ಕಳ ಕಲಿಕೆಗೆ ಉತ್ತೇಜನ ನೀಡಲಾಗುತ್ತಿದೆ. ಇತ್ತೀಚೆಗೆ ತಾಲೂಕ ಪಂಚಾಯತಿಯಿಂದಲೂ 8 ರ್ಯಾಕ ಹಾಗೂ 2 ಕಂಪ್ಯೂಟರ ಪೂರೈಸಲಾಗಿದ್ದು ಇದು ಗ್ರಂಥಾಲಯಕ್ಕೆ ಮತ್ತಷ್ಟು ಮೆರಗು ತಂದಿದೆ. ಕಲಿಕೆಯ ಜೊತೆಗೆ ಬುದ್ಧಿಮತ್ತೆಯನ್ನು ವಿಕಸಿಸುವ ಕ್ರೀಡೆಯಾದ ಚೆಸ್ ಆಟವನ್ನಾಡಲು ಚೆಸ್ ಬೋರ್ಡ ಹಾಗೂ ಇತರೆ ಆಟದ ಸಾಮಾಗ್ರಿಗಳು ಗ್ರಂಥಾಲಯದಲ್ಲಿ ಲಭ್ಯವಿವೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಪ್ರದೇಶದ ಮಕ್ಕಳಿಗಿಂತ ಕಲಿಕೆಯಲ್ಲಿ ಹಿಂದುಳಿಯಬಾರದೆಂಬ ಉದ್ದೇಶದಿಂದ ಸ್ಥಾಪಿಸಲಾದ ಗ್ರಂಥಾಲಯವು ತನ್ನ ಆಶಯವನ್ನು ಈಡೇರಿಸುವಲ್ಲಿ ದಾಪುಗಾಲಿಡುತ್ತಿರುವದು ಹೆಮ್ಮೆಯ ವಿಷಯ.

**ಶ್ರೀ ಚಂದ್ರಶೇಖರ ಕುರ್ತಕೋಟಿ**
ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಅಣ್ಣಿಗೇರಿ

### ಗೌರವಯುತ ಅಂತ್ಯ ಸಂಸ್ಕಾರಕ್ಕಾಗಿ...

ನಲವಡಿ ಗ್ರಾಮದಲ್ಲಿ ಬರುವ 2 ರುದ್ರಭೂಮಿಗಳನ್ನು ನರೇಗಾ ಹಾಗೂ 15 ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಒಂದು ರುದ್ರಭೂಮಿಯಲ್ಲಿ ಚಿತಾಗಾರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಸ್ಮಶಾನಗಳಿಗೆ ಈಗಾಗಲೇ ಕಂಪೌಂಡ ಗೋಡೆ ನಿರ್ಮಿಸಲಾಗಿದ್ದು, ಒಳಭಾಗದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.ಹಾಗೆಯೇ ಕಂಪೌಂಡ್‌ಗೆ ಗೇಟ್ ಅಳವಡಿಸಲಾಗಿದ್ದು, ಹೈಮಾಸ್ಟ ವಿದ್ಯುತ್ ದೀಪಗಳನ್ನು ಕೂಡಾ ಅಳವಡಿಸಲಾಗಿದೆ.ನರೆಗಾ ಯೋಜನೆಯಡಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯ ಕಾಮಗಾರಿಗಳ ಜೊತೆಯಲ್ಲಿ ಕೃಷಿಹೊಂಡ ಇತ್ಯಾದಿ ಬಾಳಿಕೆ ಬರುವ ಆಸ್ತಿಗಳ ಸೃಜನೆಗೂ ಆದ್ಯತೆ ನೀಡಲಾಗುತ್ತಿದೆ.

**ಶ್ರೀ ಆನಂದ ಶಿವಾನಂದ ನಾವಳ್ಳಿ**
ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತ್ ನಲವಡಿ





## ಮನೆ ಮನೆಗೂ ಗಂಗೆ...



◆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ 2 ಗ್ರಾಮಗಳ ಎಲ್ಲಾ1,322 ಕುಟುಂಬಗಳಿಗೂ ಜಲ ಜೀವನ ಮಿಷನ್ ಯೋಜನೆಯ ಅಡಿಯಲ್ಲಿ ಹೊಸದಾಗಿ ನೀರು ಸರಬರಾಜು ಕೊಳವೆಗಳನ್ನು ಅಳವಡಿಸಿ, ಶೇ 100 ರಷ್ಟು ಮನೆಗಳಿಗೆ ಕಾರ್ಯಾತ್ಮಕ ನಲ್ಲಿ ನೀರಿನ ಸಂಪರ್ಕ ಅಳವಡಿಸಲಾಗಿದ್ದು, ಶುದ್ಧ ಹಾಗೂ ಸುರಕ್ಷಿತ ನೀರನ್ನು ನಿಗದಿತ ಪ್ರಮಾಣದಲ್ಲಿ ಗ್ರಾಮಸ್ಥರಿಗೆ ನೀಡುವದರ ಮೂಲಕ ಎರಡೂ ಗ್ರಾಮಗಳಲ್ಲಿ ಯೋಜನೆಯು ಅನುಷ್ಠಾನವಾಗಿದೆ ಎಂದು ಗ್ರಾಮ ನೀರು ಮತ್ತು ನೈರ್ಮಲ್ಯ ಸಮೀತಿಯ ಮೂಲಕ ಘೋಷಿಸಲಾಗಿದೆ. ಮನೆಗೆ ಸಂಪರ್ಕಿಸಲಾದ ನಳಕ್ಕೆ ಮೀಟರ್ ಅಳವಡಿಸಲಾಗಿದೆ. ಇದರಿಂದ, ಗ್ರಾಮಗಳಲ್ಲಿ ನೀರು ವ್ಯರ್ಥವಾಗುವದನ್ನು ತಡೆಯಲಾಗಿದೆ ಮತ್ತು ನಿಗದಿತ ಒತ್ತಡದಲ್ಲಿ ನೀರು ಸರಬರಾಜು ಆಗುತ್ತಿರುವದರಿಂದ ನೀರಿನ ಸಮರ್ಪಕ ಬಳಕೆಯಾಗುತ್ತಿದೆ ಜೊತೆಗೆ ಈಗಿರುವ ಜಲ ಮೂಲಗಳ ಸಂರಕ್ಷಣೆಯನ್ನು ಕೂಡಾ ಮಾಡಲಾಗುತ್ತಿದೆ. ಪ್ರತಿಯೊಂದು ಗ್ರಾಮದಲ್ಲಿ ಒಂದೊಂದು ಶುದ್ಧ ಕುಡಿಯುವ ನೀರಿನ ಘಟಕಗಳಿವೆ.

**ಶ್ರೀ ವೆಂಕನಗೌಡ ಪಾಟೀಲ್**
ಸದಸ್ಯರು
ಗ್ರಾಮ ಪಂಚಾಯತ್ ನಲವಡಿ

## ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ...



◆ ಗ್ರಾಮ ಪಂಚಾಯತಗಳು ಸರಕಾರದ ಸೇವೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ಒದಗಿಸುವದರ ಜೊತೆ ಜೊತೆಗೆ ಗ್ರಾಮೀಣ ಭಾಗದ ದೇಶಿ ಕ್ರೀಡೆಗಳಿಗೆ ಉತ್ತೇಜನ ನೀಡುವ ಕೆಲಸವನ್ನು ಮಾಡುತ್ತಿವೆ. ನಲವಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಕ್ಕಳು ಮತ್ತು ಯುವಕರನ್ನು ಕ್ರೀಡಾ ಚಟುಚಟುಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವ ಉದ್ದೇಶದಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯ ಶಾಲೆಗಳ ಆಟದ ಮೈದಾನಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದ್ದು ಅದರ ಜೊತೆ ಜೊತೆಗೆ ಗ್ರಾಮೀಣ ಕ್ರೀಡಾ ಕೂಟದ ಆಯೋಜನೆಗೂ ಒತ್ತು ನೀಡಲಾಗಿದೆ. ಇದರಿಂದ ಗ್ರಾಮೀಣ ಭಾಗದ ಯುವಕರಲ್ಲಿ ಅಡಗಿರುವ ಸಾಮರ್ಥ್ಯ ಹಾಗೂ ಕೌಶಲಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಒಂದು ವೇದಿಕೆಯನ್ನು ಒದಗಿಸಲಾಗಿದೆ.ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮೀಣ ಕ್ರೀಡಾಕೂಟ ಆಯೋಜಿಸಿ ಕಬಡ್ಡಿ, ಖೋ ಖೋ ಹಾಗೂ ವ್ಹಾಲಿಬಾಲ್ ಪಂದ್ಯಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನವನ್ನು ಕೂಡ ವಿತರಿಸಲಾಗಿದೆ.

**ಶ್ರೀ ಬಸಪ್ಪ ಯ. ಗಾಣಿಗೇರ**
ಸದಸ್ಯರು,
ಗ್ರಾಮ ಪಂಚಾಯತ ನಲವಡಿ

## " ಸ್ವಚ್ಚ-ಶನಿವಾರ " ಗ್ರಾಮದ ನಡೆ ಸ್ವಚ್ಛತೆ ಕಡೆ...

◆ ಗ್ರಾಮೀಣ ಸಮುದಾಯದಲ್ಲಿ ಸುಸ್ಥಿರ ನೈರ್ಮಲ್ಯ ಹಾಗೂ ಶುಚಿತ್ವದ ಅಭ್ಯಾಸಗಳನ್ನು ರೂಢಿಸುವ ನಿಟ್ಟಿನಲ್ಲಿ ಘನ ಸರಕಾರದ ನಿರ್ದೇಶನದನ್ವಯ ಪ್ರತಿ ಮಾಹೆಯ ಮೊದಲ ಶನಿವಾರದಂದು "ನಮ್ಮ ಗ್ರಾಮ ಸ್ವಚ್ಛ ಗ್ರಾಮ-ಗ್ರಾಮದ ನಡೆ ಸ್ವಚ್ಛತೆಯ ಕಡೆ"ಗೆ ಎಂಬ ಘೋಷವಾಕ್ಯದೊಂದಿಗೆ ಶ್ರಮದಾನ ಕಾರ್ಯಕ್ರಮವನ್ನು ನಲವಡಿ ಹಾಗೂ ಮಣಕವಾಡ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ನೈರ್ಮಲ್ಯದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವದರ ಜೊತೆಗೆ ಶೌಚಾಲಯದ ಸಮರ್ಪಕ ಬಳಕೆ, ಏಕಬಳಕೆಯ ಪಾಸ್ಟಿಕ್ ನಿಷೇಧ, ಸಮರ್ಪಕ ಕಸ ವಿಲೇವಾರಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವ ಬಗ್ಗೆ ತಿಳಿಸಿ ಗ್ರಾಮದಲ್ಲಿ ಸ್ವಚ್ಛ-ಸುಂದರ ಪರಿಸರ ನಿರ್ಮಾಣಕ್ಕೆ ಸಾರ್ವಜನಿಕರ ಸಹಭಾಗಿತ್ವದ ಪ್ರಾಮುಖ್ಯತೆ ತಿಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು. ಸಾರ್ವಜನಿಕರು, ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ಭಾಗವಹಿಸುತ್ತಿದ್ದಾರೆ.

**ಶ್ರೀಮತಿ ಪದ್ಮಾವತಿ ನಾಗನಗೌಡ್ರ**
ಜಿಲ್ಲಾ IEC ಸಮಾಲೋಚಕರು ಜಿಲ್ಲಾ ಪಂಚಾಯತ ಧಾರವಾಡ



## ನಮ್ಮ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟ...

◆ ನಲವಡಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದಲ್ಲಿ ಒಟ್ಟು 5 ವಾರ್ಡುಗಳಿದ್ದು, 64 ಸ್ವ ಸಹಾಯ ಸಂಘಗಳು ಮತ್ತು ಅವುಗಳಲ್ಲಿ ಒಟ್ಟು 720 ಸದಸ್ಯರು ಇರುತ್ತಾರೆ.

◆ ನಮ್ಮ ಒಕ್ಕೂಟದಲ್ಲಿ ಮುಖ್ಯ ಪುಸ್ತಕ ಬರಹಗಾರರು, ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು, ಕೃಷಿ ಸಖಿ, ಪಶು ಸಖಿ, ಬ್ಯಾಂಕ ಸಖಿ, ಘನ ತ್ಯಾಜ್ಯ ನಿರ್ವಹಣಾ ಸಹಾಯಕರು ಇದ್ದು, ಸ್ವಚ್ಛ ವಾಹಿನಿಯ ಚಾಲಕಿಯಾಗಿ ಒಬ್ಬರು ಮಹಿಳೆ ಧಾರವಾಡದಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾರೆ.

◆ ನಮ್ಮ ಒಕ್ಕೂಟಕ್ಕೆ ಒಟ್ಟು ರೂ 14 ಲಕ್ಷ ಸಮುದಾಯ ಬಂಡವಾಳ ನಿಧಿಯು ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾಗಿದ್ದು, ಅದರ ಪೈಕಿ 17 ಸ್ವಸಸಂಗಳಿಗೆ ರೂ 13.25 ಲಕ್ಷಗಳನ್ನು ಸಾಲ ರೂಪದಲ್ಲಿ ಬಿಡುಗಡೆ ಮಾಡಿದ್ದು ಸಮಯಕ್ಕೆ ಸರಿಯಾಗಿ ಈ ಸ್ವಸಸಂಗಳು ಸಾಲ ಮರು ಸಂದಾಯ ಮಾಡುತ್ತಿವೆ.

◆ 2022-23 ನೇ ಸಾಲಿನಲ್ಲಿ ಜಿಲ್ಲೆಯ ಅತ್ಯುತ್ತಮ ಒಕ್ಕೂಟ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ನಮ್ಮ ಒಕ್ಕೂಟವು ಪಡೆದುಕೊಂಡಿದ್ದು, ಜಿಲ್ಲಾ ಪಂಚಾಯತಿಯಿಂದ ರೂ 75,000 ಬಹುಮಾನ ಪಡೆದುಕೊಂಡಿದೆ.

**ಶ್ರೀಮತಿ ಪುಷ್ಪಾ ಯರಗುಪ್ಪಿ**
ಅಧ್ಯಕ್ಷರು, ನಲವಡಿ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟ



## ಆರ್ಥಿಕ ಸಬಲತೆಯಿಂದ ಮಾತ್ರ ಮಹಿಳಾ ಸಬಲೀಕರಣ...

◆ ಪ್ರತಿಯೊಂದು ಸ್ವ ಸಹಾಯ ಸಂಘದ ಸದಸ್ಯರಿಗೂ ಹಣಕಾಸು ಸಾಕ್ಷರತೆ ನೀಡುವ ಮೂಲಕ ಸದಸ್ಯರ ಮತ್ತು ಅವರ ಕುಟುಂಬಗಳ ಆರ್ಥಿಕ ಮಟ್ಟವನ್ನು ಎತ್ತರಿಸುವ ಉದ್ದೇಶದಿಂದ ನಲವಡಿ ಮತ್ತು ಬಧ್ರಾಪೂರ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಿಗೆ ಒಬ್ಬ FLCRP ಯನ್ನು ನೇಮಿಸಲಾಗಿದೆ. ನಲವಡಿ ಗ್ರಾಮದ ಶ್ರೀಮತಿ ರತ್ನಾ ಗಾಣಿಗೇರ ಇವರನ್ನು ಒಕ್ಕೂಟದವರು ಆಯ್ಕೆಮಾಡಿದ್ದು, ಅವರಿಗೆ ಧಾರವಾಡದ ರುಡ್‌ಸೆಟ್ ಸಂಸ್ಥೆಯಲ್ಲಿ ತರಬೇತಿ ನೀಡಿ ಪ್ರಮಾಣೀಕರಿಸಲಾಗಿದ್ದು, ಅವರು ತಮ್ಮ ವ್ಯಾಪ್ತಿಗೆ ಬರುವ ಸ್ವ ಸಹಾಯ ಸಂಘಗಳ ಮಹಿಳೆಯರಿಗೆ ಸಾಕ್ಷರತಾ ತರಬೇತಿ ನೀಡುವಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

◆ ನಲವಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ಪ್ರದೇಶದ ಜನರ ಮನೆ ಬಾಗಿಲಿಗೆ ಹಣಕಾಸು, ಹಣಕಾಸೇತರ ಸೇವೆಗಳು, ಸಾಮಾಜಿಕ ಸುರಕ್ಷಾ ಸೇವೆಗಳನ್ನು ಡಿಜಿಟಲ್ ಮಾಧ್ಯಮದ ಮೂಲಕ ಒದಗಿಸುತ್ತಿರುವವರು ಬಿ ಸಿ ಸಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಅನ್ನಪೂರ್ಣಾ ಶಿರಗುಪ್ಪಿಯವರು.

◆ ಇಂಥ ಕಾರ್ಯಗಳ ಮೂಲಕ ಒಕ್ಕೂಟದಿಂದ ಹಣಕಾಸನ್ನು ತಮ್ಮ ಉದ್ಯೋಗಕ್ಕೆ ಪಡೆದುಕೊಂಡ ಸಂಘಗಳ ಸದಸ್ಯರು ಪಡೆದುಕೊಳ್ಳುತ್ತಾರೆ ಮಾತ್ರವಲ್ಲ, ಸರಿಯಾದ ಸಮಯಕ್ಕೆ ಮರುಪಾವತಿಯನ್ನೂ ಮಾಡುತ್ತಿದ್ದಾರೆ. ಮಾಸಿಕ ಸಂತೆಗಳಲ್ಲಿ ನಮ್ಮ ಮಹಿಳೆಯರು ತಮ್ಮ ಉತ್ಪನ್ನಗಳನ್ನು ಮಾರುವ ಮೂಲಕ ಆರ್ಥಿಕ ಸಬಲತೆಯೆಡೆಗೆ ಸಾಗುತ್ತಿದ್ದಾರೆ

**ಕು. ಸೀಮಾಕೌಸರ್ ಕುಕನೂರ**
ಯುವ ವೃತ್ತಿಪರರು, ಜಿಲ್ಲಾ ಪಂಚಾಯತ್ ಧಾರವಾಡ





ಮಾತು ಕತೆ
ನಮ್ಮ ನಡೆ ಗ್ರಾಮದ ಕಡೆ...

ಕರ್ನಾಟಕ ಸರಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಜಿಲ್ಲಾ ಪಂಚಾಯತ ಧಾರವಾಡ



# ನಲವಡಿ ಗ್ರಾಮ ಪಂಚಾಯತಿ

ಸಂಪುಟ : 01 ಸಂಚಿಕೆ 05 : ಮೇ 2023

## ಹೊಲಿಗೆ ಮತ್ತು ವಿನ್ಯಾಸ ನನ್ನ ಉದ್ಯೋಗ ...



◆ ಜೀವನೋಪಾಯಕ್ಕಾಗಿ ಸ್ವಯಂ ಉದ್ಯೋಗ ಮಾಡಬೇಕೆಂದು ದೃಢವಾಗಿ ನಿಶ್ಚಯಿಸಿದ ನಾನು, ಇನ್ನಷ್ಟು ಹೆಚ್ಚಿನ ಕೌಶಲ್ಯ ಪಡೆಯಲು ಹಳಿಯಾಳದಲ್ಲಿರುವ ದೇಶಪಾಂಡೆ ಆರ್‌ಸೆಟಿಯಲ್ಲಿ ಹೊಲಿಗೆ ಮತ್ತು ಫ್ಯಾಶನ್ ಡಿಜೈನಿಂಗನಲ್ಲಿ ತರಬೇತಿ ಪಡೆದುಕೊಂಡು, ಕುಪ್ಪಸ ಹೊಲಿಯುವರು, ಜರ್ದೋಸಿ ಕರಕೌಶಲ್ಯ ಮಾಡುವದು, ಶೀರೆಗಳಿಗೆ ಪೀಕೋ ಮತ್ತು ಫಾಲ್ಸ ಹಚ್ಚುವ ಕೆಲಸವನ್ನು ಮಾಡುತ್ತೇನೆ. ಸ್ಥಳೀಯವಾಗಿಯೂ ಮತ್ತು ಹುಬ್ಬಳ್ಳಿ ನಗರದಲ್ಲಿ ನಮ್ಮ ಸಂಬಂಧಿಕರ ಮತ್ತು ಪರಿಚಯಸ್ಥರ ಮೂಲಕ ಆರ್ಡರ್ ಪಡೆದುಕೊಂಡು ಕೆಲಸ ನಿರ್ವಹಿಸುತ್ತಿದ್ದು, ಟೇಲರಿಂಗ್ ಮತ್ತು ಅವಶ್ಯಕವಾದ ಶೃಂಗಾರ ಸಾಮಗ್ರಿಗಳನ್ನು ಹುಬ್ಬಳ್ಳಿ ನಗರದಿಂದ ತರುತ್ತಿದ್ದು, ಪ್ರತಿ ತಿಂಗಳು ಸರಾಸರಿ ರೂ 12,000 ಗಳ ಆದಾಯವನ್ನು ಈ ಕೆಲಸವು ನನಗೆ ಒದಗಿಸುತ್ತದೆ.

◆ ದುರ್ಗಾ ಪರಮೇಶ್ವರಿ ಸ್ವಸಹಾಯ ಸಂಘದ ಮೂಲಕ ಸಮುದಾಯ ಬಂಡವಾಳ ನಿಧಿಯಿಂದ ಸಾಲವನ್ನು ಪಡೆದುಕೊಂಡು ಕಸೂತಿ ಯಂತ್ರವನ್ನು ಖರೀದಿಸಲು ಉತ್ಸುಕಳಾಗಿದ್ದು, ಈಗಾಗಲೇ ಅರ್ಜಿ ಸಲ್ಲಿಸಿದ್ದೇನೆ.

**ಶ್ರೀಮತಿ ಸುಧಾ ನಾರಾಯಣ ಕಮ್ಮಾರ**
ಮಹಿಳಾ ಉದ್ಯಮಿ, ಮಣಕವಾಡ

## ಮಣಕವಾಡದ ಎಸ್ ಆರ್ ಅಗರಬತ್ತಿಯ ಪರಿಮಳ...

◆ ಕೇವಲ 4 ಎಕರೆ ಕೃಷಿ ಜಮೀನು ಹೊಂದಿದ ಕುಟುಂಬದವಳಾದ ನಾನು ಅರೆಕಾಲಿಕ ಕೃಷಿ ಕೆಲಸದ ಜೊತೆಗೆ ಸ್ವಯಂ ಉದ್ಯೋಗ ಮಾಡಬೇಕೆಂದು ನಿರ್ಧರಿಸಿ, ನಮ್ಮ ಭುವನೇಶ್ವರಿ ಸ್ತ್ರೀಶಕ್ತಿ ಸ್ವ ಸಹಾಯ ಸಂಘದ ಮೂಲಕ ಸಾಲ ಪಡೆದುಕೊಂಡು ರೂ 2.00 ಲಕ್ಷಗಳ ವೆಚ್ಚದಲ್ಲಿ ಅಗರಬತ್ತಿ ತಯಾರಿಸುವ ಕಿರು ಉದ್ದಿಮೆಯನ್ನು ನನ್ನ ಮನೆಯಲ್ಲೇ ಸ್ಥಾಪಿಸಿದೆನು.

◆ ಕಚ್ಚಾ ಸಾಮಗ್ರಿಗಳನ್ನು ಸಮೀಪದ ಹುಬ್ಬಳ್ಳಿ ಶಹರದಿಂದ ಖರೀದಿಸಿ ತರುತ್ತಿದ್ದು, ಹುಬ್ಬಳ್ಳಿ, ಗದಗ, ಮಂಡ್ಯ, ಬೆಂಗಳೂರು ಮುಂತಾದ ನಗರಗಳಿಂದ ಆರ್ಡರ್ ಪಡೆದುಕೊಂಡು, ನಮ್ಮಲ್ಲಿ ಅಗರಬತ್ತಿಗಳನ್ನು ತಯಾರು ಮಾಡಿ ಕಳಿಸುತ್ತಿದ್ದು, ಸ್ಥಳೀಯವಾಗಿ ವಿವಿಧ ಮೇಳಗಳು, ಸಂತೆಗಳಲ್ಲಿಯೂ ಮಾರುತ್ತಿದ್ದು, ಕಳೆದ 3 ವರ್ಷಗಳಿಂದ ನನ್ನ ಕುಟುಂಬಕ್ಕೆ ಪ್ರತಿ ತಿಂಗಳು ಸರಾಸರಿ ರೂ 10,000ಗಳ ಪೂರಕ ಆದಾಯವನ್ನು ಪಡೆಯುತ್ತಿದ್ದೇನೆ.

**ಶ್ರೀಮತಿ ಸುಜಾತಾ ವೀರಣ್ಣ ಚಾಕಲಬ್ಬಿ**
ಮಹಿಳಾ ಉದ್ಯಮಿ, ಮಣಕವಾಡ



ಮಾಸ ಪತ್ರಿಕೆಯ ಪ್ರಕಟಣೆ
ಗ್ರಾಮ ಪಂಚಾಯತ ನಲವಡಿ
dwr.nvl.nal@gmail.com
Dharwad Zilla Panchayat
ZPDharwad
Dharwad Zilla Panchayat
Dharwad Zilla Panchayat
https://zpdharwad.karnataka.gov.in